ಉ) ಶ್ರೀ ರಾಮಯ್ಯ ಮಾತಾ ಸೆಕ್ಯುರಿಟಿ ಸರ್ವಿಸಸ್, ತುಮಕೂರು.

ಊ) 21.04.2007 ರಿಂದ 31.03.2008 ರವರೆಗೆ.

ಅರಸೀಕರೆ ಪುರಸಭೆಯ ವ್ಯಾಪ್ತಿಯ ವಾರ್ಡ್ ನಂ. 2 ರಿಂದ 13ರ ವರೆಗಿನ ಘನತ್ಯಾಜ್ಯ ವಸ್ತುವಿನ ವಿಲೇವಾರಿ ಗುತ್ತಿಗೆ ನೀಡಲು ಪುರಸಭೆಯ ವ್ಯಾಪ್ತಿಯಿಂದ ದಿ. 24.02.2007ರಂದು ಟೆಂಡರ್ ಕರೆಯಲಾಗಿದ್ದು, ಸದರಿ ಟೆಂಡರ್ ಜಿಲ್ಲಾಧಿಕಾರಿಯವರಿಂದ ದಿ. 19.4.2007 ರಲ್ಲಿ ಅನುಮೋದನೆ ಪಡೆದು ದರ ರೂ. 88,880/–ಗಳಿಗೆ ಕಾರ್ಯನಿರ್ವಹಿಸಲು ಅನುಮೋದನೆಯನ್ನು ನೀಡಲಾಗಿದೆ.

ಪ್ರಶ್ನೆ ಸಂಖ್ಯೆ : 43 (196) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ?

ಅ) ಪ್ರತಿ ವಿಶ್ವವಿದ್ಯಾಲಯಗಳಿಂದ ಪ್ರಥಮ ದರ್ಜೆಯಲ್ಲಿ ಪ್ರಥಮ ಪ್ರಯತ್ನದಲ್ಲಿ ಉತ್ತೀರ್ಣರಾದ ಮೂವರು ಪರಿಶಿಷ್ಟ ಜಾತಿ ಮತ್ತು ಪಂಗಡದ ಅಭ್ಯರ್ಥಿಗಳನ್ನು ಗ್ರೂಪ್–ಎ ಮತ್ತು ಗ್ರೂಪ್–ಬಿ ಹುದ್ದೆಗಳಿಗೆ ನೇರ ನೇಮಕಾತಿ ಮಾಡಿ ಕೊಳ್ಳಲು 1985ರಲ್ಲಿ ಸರ್ಕಾರ ಆದೇಶ ಹೊರಡಿಸಿರುವುದು ನಿಜವೇ;

ಆ) ಈ ಆದೇಶವನ್ನು ಪರಿಪಾಲಿಸಿಕೊಂಡು ಬರಲಾಗುತ್ತಿದೆಯೇ;

ಇ) ಹಾಗಿದ್ದಲ್ಲಿ ಕಳೆದ ಮೂರು ವರ್ಷಗಳಲ್ಲಿ ಈ ಆದೇಶದ ಅನ್ವಯ ಗ್ರೂಪ್ – ಎ ಮತ್ತು ಗ್ರೂಪ್ – ಬಿ ಹುದ್ದೆಗಳಿಗೆ ನೇರ ನೇಮಕಗೊಂಡ ಅಭ್ಯರ್ಥಿಗಳ ಸಂಖ್ಯೆ ಎಷ್ಟು?

**ಶ್ರೀ ಹೆಚ್.ಡಿ.ಕುಮಾರಸ್ವಾಮಿ**

ಅ) ಕರ್ನಾಟಕ ಸಿವಿಲ್ ಸೇವೆಗಳು (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳ ಕೆಲವೊಂದು ಗುಂಪು–ಎ ಮತ್ತು ಗುಂಪು–ಬಿ ಹುದ್ದೆಗಳಿಗೆ ವಿಶೇಷ ನೇಮಕಾತಿ) ನಿಯಮಗಳು, 1985 ದಿನಾಂಕ 11–4–1985 ರಿಂದ ಜಾರಿಗೆ ಬಂದಿವೆ.

ಆ) ಹೌದು

ಇ) 2002–03 ಹಾಗೂ ನಂತರ ಶೈಕ್ಷಣಿಕ ಸಾಲುಗಳಿಗೆ ಸಂಬಂಧಿಸಿದಂ
ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ.

ಪ್ರಶ್ನೆ ಸಂಖ್ಯೆ : 44 (197) ಶ್ರೀ ಧ್ರುವನಾರಾಯಣ ಆರ್. (ಸಂತೇಮರಳ್ಳಿ

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ

ಅ) ಕೋಲಾರ ತಾಲ್ಲೂಕಿನ ದೊಡ್ಡ ಅಯ್ಯರು ಬೆಟ್ಟಗಳಲ್ಲಿ ಕಲ್ಲು ಗಣಿಗಾರಿ
ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ದೊಡ್ಡ ಅಯ್ಯರಿನ ಬೆಟ್ಟಕ್ಕೆ ಹೊಂದಿಕೊಂಡ ಖಾಜಿಕಲ್ಲಿಹಳ್ಳಿ ಬೆಟ್ಟದ
ದೇವರಗುಡಿ ಇರುವುದು ಮತ್ತು ಪ್ರತಿವಾರವೂ ಭಕ್ತಾಧಿಗಳು ಇಲ್ಲಿ ಪೂಜ
ಪುನಸ್ಕಾರಗಳನ್ನು ಮಾಡುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಬ್ಬದ ದಿನಗಳಲ್ಲಿ ಈ ಎರಡು ಬೆಟ್ಟಗಳಲ್ಲಿ ಜನತೆ ಅಗ್ನಿಕುಂ
ಹಾಕುವುದು ಸರ್ಕಾರದ ಗಮನದಲ್ಲಿ ಇದೆಯೇ;

ಈ) ಈ ಜೋಡಿ ಬೆಟ್ಟದಲ್ಲಿ ಕಲ್ಲು ಗಣಿಗಾರಿಕೆ ನಡೆಸಿ, ಬೆಟ
ಕರಗಿರುವುದರಿಂದ ಪರಿಸರ ಅಸಮತೋಲನ ಉಂಟಾಗುವುದರ ಜೊತೆ
ಸಾಂಪ್ರದಾಯಿಕ ಜೊತೆಗೆ ಸಾಂಪ್ರದಾಯಿಕ ಆಚರಣೆಗಳಿಗೆ ತೊಂದ
ಉಂಟಾಗುವುದಿಲ್ಲವೇ?

**ಶ್ರೀ ಹೆಚ್.ಡಿ.ಕುಮಾರಸ್ವಾಮಿ**

ಅ) ಬಂದಿದೆ.

ಆ) ಬಂದಿದೆ.

ಇ) ಸ್ಥಾನಿಕ ವಿಚಾರಣೆಯಿಂದಾಗಿ ಈ ರೀತಿಯ ಆಚರಣೆ ನಡೆಯುತ್ತಿರು
ಬಗ್ಗೆ ಯಾವುದೇ ಖಚಿತ ಮಾಹಿತಿ ಲಭ್ಯವಾಗಿಲ್ಲ.